# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ಗುರುತಿನ ಪ್ರಶ್ನೆ

ದಿನಾಂಕ : 25-03-2021 ಪ್ರಶ್ನೆ ಸಂಖ್ಯೆ : 294 (2143)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು )

ಉತ್ತರ ನೀಡಬೇಕಾದ ದಿನಾಂಕ : 25-03-2021

ಉತ್ತರಿಸುವ ಸಚಿವರು : ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು

ವಿಷಯ : ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಬಾಂಗ್ಲಾ ಮತ್ತು ಇತರ ಮುಸ್ಲಿಂ ಪ್ರಜೆಗಳ ಕುರಿತು

(ಅ) ರಾಜ್ಯದಲ್ಲಿ ಅಕ್ರಮವಾಗಿ ಬಂದು ನೆಲೆಸಿರುವ ಬಾಂಗ್ಲಾ ಮತ್ತು ಇತರ ಮುಸ್ಲಿಂ ಪ್ರಜೆಗಳನ್ನು ಗುರುತಿಸಲು ಸರ್ಕಾರದ ಬಳಿಯಿರುವ ವ್ಯವಸ್ಥೆಗಳೇನು;

(ಆ) ಸದರಿ ವ್ಯವಸ್ಥೆಗಳು, ಈ ರೀತಿಯ ಸಮಸ್ಯೆಗಳನ್ನು ಗುರುತಿಸಿ ಕಾನೂನು ರೀತ್ಯಾ ಬಗೆಹರಿಸಲು ಸಮರ್ಪಕ ಸಂಖ್ಯೆಯಲ್ಲಿ ಹಣಕಾಸು, ಸಿಬ್ಬಂದಿ ಹಾಗೂ ತತ್ಸಂಬಂಧಿತ ವ್ಯವಸ್ಥೆಗಳನ್ನು ಹೊಂದಿದೆಯೇ;

(ಇ) ಕೊರತೆಗಳಿದ್ದಲ್ಲಿ, ಸರಿಪಡಿಸಲು ಸರ್ಕಾರದ ಕ್ರಮಗಳೇನು;

(ಈ) ಮುಸ್ಲಿಂ ಜನ ಸಂಖ್ಯೆ ಹೆಚ್ಚಿರುವ ಪ್ರದೇಶಗಳಲ್ಲಿ ಸದರಿ ನುಸುಳುಕೋರರಿಗೆ ಸ್ಥಳೀಯರೇ ಸಹಕಾರ ನೀಡುತ್ತಿರುವುದು ಪೋಲಿಸ್ ಇಲಾಖೆಗೆ ಮತ್ತಷ್ಟು ಸಮಸ್ಯೆಗಳಿಗೆ ಕಾರಣವಾಗಿಲ್ಲವೇ; ಹಾಗಿದ್ದಲ್ಲಿ, ಸದರಿ ಸಮಸ್ಯೆಗಳನ್ನು ಎದುರಿಸಲು ಗೃಹ ಇಲಾಖೆ ಸಂಪೂರ್ಣ ಸ್ವಾಯತ್ತ ಬೇರೆ ಇಲಾಖೆ ರೂಪಿಸಿಕೊಳ್ಳಲು ಸರ್ಕಾರದ ಕ್ರಮಗಳೇನು;

(ಉ) ಈ ವ್ಯವಸ್ಥೆಗೆ ಪೂರ್ಣವಾಗಿ ಮುಸ್ಲಿಂ ಜನಸಂಖ್ಯೆ ಹೆಚ್ಚಿರುವ ಪ್ರದೇಶಗಳಲ್ಲಿ ಸತತ ನಿಗಾ ವಹಿಸಲು ಮೀಸಲು ಪಡೆಗಳ ವಾಹನಗಳನ್ನು ಸಿಬ್ಬಂದಿ ಸಮೇತ ಸಹಕಾರ ಪಡೆಯಲು ಸರ್ಕಾರದ ಕ್ರಮಗಳೇನು?